

ಇಂಗ್ಲೀಷಿನಲ್ಲಿ ಶಮಿಯ ನೌಕರಿಯ ಹುಡುಕಾಟ, ಹಳೆ ಕಾರಿನ ರಿಪೇರಿ, ಮೆಡಿಕಲ್ ಇನ್ಶೂರನ್ಸ್... ಎಲ್ಲವನ್ನೂ ಆಸಕ್ತಿಯಿಂದ ಕೇಳಿ ತಿಳಿದುಕೊಂಡಿದ್ದ. ಎಲ್ಲದಕ್ಕೂ ಅವನಲ್ಲಿ ಅನುಕಂಪವಿತ್ತು. ಛತ್ರದ ಸುದ್ದಿ ಕೇಳಿದವನೇ ಹೇಳಿದ್ದ:

"ಕಾಳಜಿಯಿಂದಿರು. ಅಷ್ಟು ಜನರನ್ನು ಒಳಗಿಟ್ಟುಕೊಳ್ಳುವ ಅಂತಹ ಮನೆಗಳು ಅಪಾಯಕಾರಿ, ಯಾವ ಸಮಯದಲ್ಲೂ ಇಮಿಗ್ರೇಷನ್ ಆಫೀಸರ್ ಬರಬಹುದು.''

"ನಾನು ಸಿಟಿಝನ್ ಆಗಿ ಹತ್ತು ವರ್ಷ ಆಗಿದೆಯಪ್ಪ, ನನಗೆ ಇಮಿಗ್ರೇಷನ್ ಆಫೀಸರ್‌ನ ಭಯ ಇಲ್ಲ."

ಅಲ್ಲಿ ಕೆಲಸ ಮಾಡುತ್ತಿದ್ದ ಎಲ್ಲರೂ ಹೇಳುವ ಮಾತದು. ಕಾರ್ಲಿತೋ ಅದನ್ನೂ ಗಂಭೀರವಾಗಿಯೇ ಸ್ವೀಕರಿಸಿ,

"ನೀನು ಹೇಳುವುದು ಒಂದೊಮ್ಮೆ ನಿಜವೇ ಇದ್ದರೂ ರಾತ್ರಿ ಮಲಗುವುದಕ್ಕೆ ಅಷ್ಟೊಂದು ಖರ್ಚೇಕೆ? ಈ ಬೇಸಗೆಯಲ್ಲಿ ಎಲ್ಲಿ ಮಲಗಿದರೂ ನಿದ್ದೆ ಬರುತ್ತದೆ. ಎಷ್ಟೆಲ್ಲ ಖಾಲಿ ಮನೆಗಳಿವೆ? ನಮ್ಮದಿರಲಿ, ಸಮಾಜದ್ದಿರಲಿ, ಯಾವುದನ್ನೂ ವೇಸ್ಟ್ ಮಾಡಬಾರದು. ಒಬ್ಬನೇ ಇದ್ದರೆ ಯಾರ ಕಣ್ಣೂ ಬೀಳುವುದಿಲ್ಲ. ನಿನಗೊಂದು ಜಾಗ ತೋರಿಸುತ್ತೇನೆ. ಬಾಡಿಗೆಯಿಲ್ಲದೇ ಒಂದು ತಿಂಗಳು ಇದ್ದುಬಿಡು. ಕೈಯಲ್ಲಿ ಸ್ವಲ್ಪ ಹಣವೂ ಆಗುತ್ತದೆ, ಉಪದ್ರವಿ ಜನರ ಸಹವಾಸವೂ ತಪ್ಪುತ್ತದೆ."

ಒಂದೆರಡು ದಿನಗಳಲ್ಲಿ ಕಾರ್ಲಿತೋ ಶಮಿಯನ್ನು ವಿಸ್ಪರಿಂಗ್ ಸ್ಟ್ರೀಮ್ಸ್‌ನ ಈ ಮನೆಗೆ ಕರೆತಂದಿದ್ದ. ಅವನ ಪ್ರಕಾರ ಓನರ್ ಬಹಳ ಶ್ರೀಮಂತ. ಬೇರೆಬೇರೆ ಕಡೆ ಇನ್ವೆಸ್ಟ್‌ಮೆಂಟ್ ಇದ್ದುದರಿಂದ ದುಡ್ಡು ತಾನೇತಾನಾಗಿ ಬಂದು ಬೀಳುತ್ತಿತ್ತು. ಕೆಲವು ತಿಂಗಳ ಹಿಂದೆ ಹೊಸ ಮನೆ ಖರೀದಿಸಿ, ವಾಸ್ತವ್ಯವನ್ನು ಅಲ್ಲಿಗೆ ಬದಲಾಯಿಸಿದ್ದರಿಂದ ಈ ಮನೆ ಖಾಲಿಯಿತ್ತು. ಮೆಂಟೆನನ್ಸ್ ಕೆಲಸಕ್ಕೆ ಬಂದ ಕಾರ್ಲಿತೋಗೆ ಧಾರಾಳವಾಗಿಯೇ ಟಿಪ್ಸ್ ಕೊಟ್ಟಿದ್ದನಂತೆ. ಈ ಮನೆ ಕಾರ್ಲಿತೋಗೆ ತುಂಬಾ ಸೇರಿತ್ತು. ಯಾವುದೋ